ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೫೧ Volume 151	ಬೆಂಗಳೂರು, ಗುರುವಾರ, ಆಗಸ್ಟ್ ೧೮, ೨೦೧೬ (ಶ್ರಾವಣ ೨೭, ಶಕ ವರ್ಷ ೧೯೩೮) Bengaluru, Thursday, August 18, 2016 (Shravana 27, Shaka Varsha 1938)	ಸಂಚಿಕೆ ೩೩ Issue 33

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು, ಮಿನಿ ವಿಧಾನ ಸೌಧ, ಕೊಠಡಿ ಸಂಖ್ಯೆ : 305, 2ನೇ ಮಹಡಿ, ತುಮಕೂರು ಜಿಲ್ಲೆ, ತುಮಕೂರು ಇವರ ಕಾರ್ಯಾಲಯದ ನಡವಳಿಕೆಗಳು.

ವಿಷಯ : ಸಮಾಪನೆಗೊಂಡಿರುವ ಸರ್ಕಾರಿ ನೌಕರರ ಬಳಕೆದಾರರ ಸಹಕಾರ ಸಂಘ ನಿ., ಬೆಳ್ಳಾವಿ, ತುಮಕೂರು ತಾಲ್ಲೂಕು ಇದರ ನೋಂದಣಿ ರದ್ದುಪಡಿಸುವ ಕುರಿತು.

ಉಲ್ಲೇಖ :

1. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪ ವಿಭಾಗ, ತುಮಕೂರು ರವರ ಪ್ರಸ್ತಾವನೆ ಪತ್ರದ ಸಂ : ಸನಿತು–32/ಸಮಾಪನೆ/02/2015–16, ದಿನಾಂಕ : 30–03–2016.
2. ಈ ಕಛೇರಿಯ ಸಮಾಪನಾ ಆದೇಶ ಸಂಖ್ಯೆ/ಡಿಆರ್‌ಟಿ:ಸಮಾಪನೆ:ಸಿಆರ್–92/2014–15, ದಿನಾಂಕ : 30–08–2014.
3. ಸಮಾಪನಾಧಿಕಾರಿಗಳ ಪ್ರಸ್ತಾವೆ ದಿನಾಂಕ : 26–03–2016.
4. ದಿನಾಂಕ : 17–03–2016ರ ಜಿಲ್ಲಾ ಮಟ್ಟದ ಪತ್ರಿಕೆಗಳಾದ ಏಕೇಶ್ ಪತ್ರಿಕೆ, ಪ್ರಜಾಯೋಗ ಮತ್ತು ತುಮಕೂರು ವಾರ್ತೆ ದಿನಪತ್ರಿಕೆಯಲ್ಲಿ ಸದರಿ ಸಂಘದ ಸದಸ್ಯರ ಗಮನಕ್ಕೆ ಪ್ರಕಟಿಸಿರುವಂತೆ.

ಪ್ರಸ್ತಾವನೆ :

ಸಮಾಪನೆಗೊಂಡಿರುವ ಸರ್ಕಾರಿ ನೌಕರರ ಬಳಕೆದಾರರ ಸಹಕಾರ ಸಂಘ ನಿ., ಬೆಳ್ಳಾವಿ, ತುಮಕೂರು ತಾಲ್ಲೂಕು ಈ ಸಹಕಾರ ಸಂಘವು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪ ವಿಭಾಗ, ತುಮಕೂರು ರವರಿಂದ ನೋಂದಣಿ ಸಂಖ್ಯೆ: ಎ.ಆರ್.ಟಿ/32/ನೋಂದಣಿ/ಆರ್‌ಸಿಎಸ್/268/1967–68, ದಿನಾಂಕ : 03–06–1968 ರಂದು ನೋಂದಣಿಯಾಗಿರುತ್ತದೆ. ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಇರುತ್ತದೆ. ಸದರಿ ಸಂಘವು ತನ್ನ ಉಪನಿಯಮಗಳ ಉದ್ದೇಶಗಳಿಗನುಗುಣವಾಗಿ ಸದಸ್ಯರ ಹಿತಕ್ಕಾಗಿ ಕಾರ್ಯನಿರ್ವಹಿಸದೇ ಸ್ಥಗಿತಗೊಂಡ ಕಾರಣ ಸಂಘವನ್ನು ಸಮಾಪನೆಗೊಳಿಸುವಂತೆ ತುಮಕೂರು ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಈ ಕಛೇರಿಗೆ ಪ್ರಸ್ತಾವೆ ಸಲ್ಲಿಸಲಾಗಿದ್ದ ಹಿನ್ನೆಲೆಯಲ್ಲಿ ಉಲ್ಲೇಖ (2)ರ ಈ ಕಛೇರಿ ಆದೇಶದ ರೀತ್ಯಾ ಸಂಘವನ್ನು ಸಮಾಪನೆಗೊಳಿಸಿ ಸಹಕಾರ ಸಂಘಗಳ ನಿರೀಕ್ಷಕರು, ತುಮಕೂರು ತಾಲ್ಲೂಕು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಸಮಾಪನಾಧಿಕಾರಿಗಳು ಸಂಘದ ಪ್ರಭಾರವನ್ನು ಪಡೆದು, ಲೆಕ್ಕಪರಿಶೋಧನಾ ವರದಿ, ಸಂಘದ ಆಸ್ತಿ–ಜವಾಬ್ದಾರಿ ತಃಖ್ತೆ ರೀತ್ಯಾ ವಿಲೇವಾರಿ ಮಾಡಿರುತ್ತಾರೆ. ಸಮಾಪನಾಧಿಕಾರಿಗಳು ದಿನಾಂಕ : 26–03–2016 ರಂದು ನಡೆದ ಅಂತಿಮ ಸಭೆಯಲ್ಲಿ ನಿರ್ಣಯ ಕೈಗೊಂಡು ಅದರಂತೆ, ಆಸ್ತಿ–ಜವಾಬ್ದಾರಿಯನ್ನು ವಿಲೇವಾರಿ ಮಾಡಿರುತ್ತಾರೆ. ದಿನಾಂಕ : 26–03–2016 ಕ್ಕೆ ಆಸ್ತಿ ಜವಾಬ್ದಾರಿ ಶೂನ್ಯಗೊಳಿಸಿ ಹಾಗೂ ಸಂಘದ ನೋಂದಣಿ ಕ್ರಮಾಂಕವನ್ನು ರದ್ದುಪಡಿಸಲು ತೀರ್ಮಾನಿಸಿ ಪ್ರಸ್ತಾವೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ ರವರಿಗೆ ಸಲ್ಲಿಸಿದ್ದು, ಉಲ್ಲೇಖ (1)ರ ಪತ್ರದಲ್ಲಿ ಈ ಕಛೇರಿಗೆ ಶಿಫಾರಸ್ಸು ಮಾಡಿರುತ್ತಾರೆ. ಸಹಕಾರ ಸಂಘಗಳ ನಿರೀಕ್ಷಕರು, ತುಮಕೂರು ತಾಲ್ಲೂಕು ರವರ ಶಿಫಾರಸ್ಸು ಮತ್ತು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಶಿಫಾರಸ್ಸು ಹಾಗೂ ದಿನಾಂಕ : 26–03–2016 ರಂದು ನಡೆಸಿದ ಸಮಾಪನಾಧಿಕಾರಿ ಸಭೆಯ ನಡವಳಿಕೆ ಮತ್ತು ಶೂನ್ಯಗೊಳಿಸಿರುವ ಆಸ್ತಿ–ಜವಾಬ್ದಾರಿ ಸಲ್ಲಿಸಿರುವ ಕಾರಣ ಸಂಘವನ್ನು ಮುಂದುವರೆಸುವುದರಿಂದ ಸದಸ್ಯರಿಗಾಗಲೀ ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವಿಲ್ಲವೆಂದು ಮನಗಂಡು ಈ ಸಹಕಾರ ಸಂಘದ ನೋಂದಣಿ ಕ್ರಮಾಂಕವನ್ನು ರದ್ದುಪಡಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

.ಸಂ.ಡಿಆರ್‌ಟಿ:ಸಮಾಪನೆ:ಸಿಆರ್–92:2014–15, ದಿನಾಂಕ : 31–03–2016.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ/139/ಸಿಎಲ್‌ಎಂ/2010, ದಿನಾಂಕ : 17–02–2011 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ, ಜಿ. ಪ್ರಕಾಶ್ ಸಹಕಾರ ಸಂಘಗಳ ಉಪನಿಬಂಧಕರು, ತುಮಕೂರು ಜಿಲ್ಲೆ, ತುಮಕೂರು ಆದ ನಾನು, ಸಮಾಪನೆಯಲ್ಲಿರುವ ಸರ್ಕಾರಿ ನೌಕರರ ಬಳಕೆದಾರರ ಸಹಕಾರ ಸಂಘ ನಿ., ಬೆಳ್ಳಾವಿ, ತುಮಕೂರು ತಾಲ್ಲೂಕು ಈ ಸಹಕಾರ ಸಂಘದ ನೋಂದಣಿ ಸಂಖ್ಯೆ : ಎಆರ್‌ಟಿ/ನೋಂದಣಿ/ಆರ್‌ಸಿಎಸ್/268/1967–68, ದಿನಾಂಕ : 03–06–1968 ರದ್ದುಪಡಿಸಿ ಕೂಡಲೇ ಜಾರಿಗೆ ಬರುವಂತೆ ಆದೇಶ ಹೊರಡಿಸಲಾಗಿದೆ.

ಈ ಆದೇಶದ ದಿನಾಂಕದಿಂದ ಸಂಘವು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಪೂರ್ಣವಾಗಿ ವಿಸರ್ಜಿತವಾಗಿದೆ ಎಂದು ಪರಿಗಣಿಸತಕ್ಕದ್ದು. ಈ ಸಹಕಾರ ಸಂಘಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 33 (ಒ) ರನ್ವಯ 03 ವರ್ಷಗಳ ಕಾಲ ಈ ಸಂಘದ ವಿಶಿಷ್ಟ ದಾಖಲಾತಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪ ವಿಭಾಗ ಇವರ ಕಾರ್ಯಾಲಯದಲ್ಲಿ ಕಾಯ್ದಿರಿಸತಕ್ಕದ್ದು.

ಈ ಆದೇಶವನ್ನು ನನ್ನ ಸ್ವ–ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ : 31–03–2016 ರಂದು ನೀಡಿರುತ್ತೇನೆ.

PR - 518
SC - 10

ಜಿ.ಪ್ರಕಾಶ್,
ಸಹಕಾರ ಸಂಘಗಳ ಉಪ ನಿಬಂಧಕರು,
ತುಮಕೂರು ಜಿಲ್ಲೆ, ತುಮಕೂರು.

ಸಹಕಾರ ಇಲಾಖೆ

ಸಹಕಾರ ಸಂಘಗಳ ಅಪರ ನಿಬಂಧಕರು, (ವಸತಿ ಮತ್ತು ಇತರೆ) ಇವರ ನ್ಯಾಯಾಲಯ

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ. 1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052.

ದಾವಾ ಸಂಖ್ಯೆ : ಅನಿ(ವ ಮತ್ತು ಇ)ಡಿ/6/ಡಿಐಎಸ್/105/2016–17

ವಾದಿ		ಪ್ರತಿವಾದಿ
ಶಾಖಾ ವ್ಯವಸ್ಥಾಪಕರು ವಾಸವಿ ಕ್ರೆಡಿಟ್ ಸಹಕಾರ ಸಂಘ (ನಿ) ಸಂಜಯ್‌ನಗರ ಶಾಖೆ, ನಂ. 04, ಎನ್.ಜಿ.ಇ.ಎಫ್. ಲೇಔಟ್, ಸಂಜಯ್‌ನಗರ ಮುಖ್ಯ ರಸ್ತೆ, ಬೆಂಗಳೂರು–560094.	1	ಶ್ರೀ ಆರ್. ನಾಗಭೂಷಣಂ ಬಿನ್ ಲೇಟ್ ಆರ್. ರಾಮಚಂದ್ರನ್ ಸೌತ್ ವೆಸ್ಟ್ರನ್ ರೈಲ್ವೆ, ಟೆಕ್ನಿಷಿಯನ್–1, ಡಿಪಾರ್ಟ್‌ಮೆಂಟ್ : ಮೆಕಾನಿಕಲ್/ಸಿಡಬ್ಲ್ಯೂಎಸ್–ಎಸ್‌ಬಿಸಿ, ಸಿನಿಯರ್ ಸೆಕ್ಷನ್ ಎಂಜಿನಿಯರ್ (ಸಿಡಬ್ಲ್ಯೂಎಸ್–ಎಸ್‌ಬಿಸಿ) ಕಛೇರಿ, ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್, ಬೆಂಗಳೂರು–23.
	2	ಶ್ರೀ ಬಾಬು ಬಿನ್ ಲೇಟ್ ಬಿ.ಎಂ. ವೆಂಕಟೇಶ್, ಸೌತ್ ವೆಸ್ಟ್ರನ್ ರೈಲ್ವೆ, ಟೆಕ್ನಿಷಿಯನ್–1, ಡಿಪಾರ್ಟ್‌ಮೆಂಟ್ : ಮೆಕಾನಿಕಲ್/ಸಿಡಬ್ಲ್ಯೂಎಸ್–ಎಸ್‌ಬಿಸಿ, ಸಿನಿಯರ್ ಸೆಕ್ಷನ್ ಎಂಜಿನಿಯರ್ (ಸಿಡಬ್ಲ್ಯೂಎಸ್–ಎಸ್‌ಬಿಸಿ) ಕಛೇರಿ, ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್, ಬೆಂಗಳೂರು–23.
	3	ಶ್ರೀಮತಿ ಲಕ್ಷ್ಮೀದೇವಿ ಕೋಂ ಲೇಟ್ ಕೆ.ಕೆ. ಶ್ರೀನಿವಾಸ್‌ಮೂರ್ತಿ, ನಂ. 258/ಸಿ, ರೈಲ್ವೆ ಕ್ವಾಟ್ರಸ್, ಎಂ.ಜಿ. ಕಾಲೋನಿ, ಬೆಂಗಳೂರು–23.
	4	ಕೆ.ಎಸ್. ಹೇಮಂತ್‌ಕುಮಾರ್ ಬಿನ್ ಲೇಟ್ ಕೆ.ಕೆ. ಶ್ರೀನಿವಾಸ್‌ಮೂರ್ತಿ, ನಂ. 258/ಸಿ, ರೈಲ್ವೆ ಕ್ವಾಟ್ರಸ್, ಎಂ.ಜಿ. ಕಾಲೋನಿ, ಬೆಂಗಳೂರು–23.
	5	ಕುಮಾರಿ ಕೆ.ಎಸ್. ಶುಶ್ಮಿತ (ಅಪ್ರಾಪ್ತ) ಬಿನ್ ಲೇಟ್ ಕೆ.ಕೆ. ಶ್ರೀನಿವಾಸ್‌ಮೂರ್ತಿ, ಅವರನ್ನು ಪ್ರತಿನಿಧಿಸುವವರು ಸ್ವಾಭಾವಿಕ ಪೋಷಕರಾದ ಶ್ರೀಮತಿ ಲಕ್ಷ್ಮೀದೇವಿ, ನಂ. 258/ಸಿ, ರೈಲ್ವೆ ಕ್ವಾಟ್ರಸ್, ಎಂ.ಜಿ. ಕಾಲೋನಿ, ಬೆಂಗಳೂರು–23.
	6	ದಿ ಸೀನಿಯರ್ ಡಿವಿಷನಲ್ ಪರ್ಸನಲ್ ಆಫೀಸರ್, ಸೌತ್ ವೆಸ್ಟ್ರನ್ ರೈಲ್ವೆ, ಬೆಂಗಳೂರು ಡಿವಿಷನ್, ಬೆಂಗಳೂರು–560023.

ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 70ರಡಿ ದಾವೆ ದಾಖಲಿಸಿ ಪ್ರತಿವಾದಿಗಳಿಂದ ವಾದಿಗೆ ದಿನಾಂಕ : 25–05–2016ಕ್ಕೆ ವಸೂಲಾಗಬೇಕಾಗಿರುವ 2,58,713/– ಗಳನ್ನು ಶೇ. 17.5% ಬಡ್ಡಿ ಹಾಗೂ ಶೇ. 2% ರ ಸುಸ್ತಿ ಬಡ್ಡಿಯೊಂದಿಗೆ ವಸೂಲಿ ಮಾಡಲು ಡಿಕ್ರಿ ನೀಡಲು ಕೋರಿರುತ್ತಾರೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ₹. 2,58,713/– ಗಳಿಗೆ ತೀರ್ಪು ಪೂರ್ವ ಜಪ್ತಿ ಆದೇಶ ನೀಡಬೇಕೆಂದು ಕೋರಿರುತ್ತಾರೆ.

ವಾದಿ ಪರ ವಕೀಲರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103 ರಡಿ ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಲು ಕೋರಿರುವ ಅರ್ಜಿ, ವಾದಿಯ ದಾವಾ ಅರ್ಜಿಯಲ್ಲಿ ಪ್ರತಿವಾದಿಗಳು ವಾದಿ ಸಂಸ್ಥೆಯ ಸದಸ್ಯರಾಗಿದ್ದು ವಾದಿ ಸಂಸ್ಥೆಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದು, 1ನೇ ಪ್ರತಿವಾದಿಯು ದಿನಾಂಕ : 08–06–2011 ರಂದು ₹. 70,000/–ಗಳನ್ನು ಸಾಲವಾಗಿ ಪಡೆದು ಕೊಂಡಿದ್ದು 2ನೇ ಪ್ರತಿವಾದಿ ಶ್ರೀ ಬಾಬು ಹಾಗೂ 3ನೇ ಪ್ರತಿವಾದಿ ಲೇಟ್ ಕೆ.ಕೆ. ಶ್ರೀನಿವಾಸ್‌ಮೂರ್ತಿ ಇವರ ಸದರಿ ಸಾಲಕ್ಕೆ ಜಾಮೀನುದಾರಾಗಿದ್ದು, 1ನೇ ಪ್ರತಿವಾದಿ ಸಂಘದಿಂದ ಪಡೆದ ಸಾಲವನ್ನು ತೀರುವಳಿ ಮಾಡದೇ ಸುಸ್ತಿದಾರರಾಗಿರುತ್ತಾರೆ ಎಂದು ಪ್ರತಿಪಾದಿಸಿದ್ದಾರೆ.

ಅದೇ ರೀತಿ 3ನೇ ಪ್ರತಿವಾದಿ ಲೇಟ್ ಕೆ.ಕೆ. ಶ್ರೀನಿವಾಸ್‌ಮೂರ್ತಿ ದಿನಾಂಕ : 08–06–2011 ರಂದು ₹. 75000/–ಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲಕ್ಕೆ 1ನೇ ಮತ್ತು 2ನೇ ಪ್ರತಿವಾದಿ ಜಾಮೀನುದಾರರಾಗಿದ್ದು, 3ನೇ ಪ್ರತಿವಾದಿ ನಿಧನ ಹೊಂದಿದ್ದು, ಪಡೆದ ಸಾಲವನ್ನು ತೀರುವಳಿ ಮಾಡದೇ ಸುಸ್ತಿದಾರರಾಗಿರುತ್ತಾರೆಂದು ವಾದಿಸಿದ್ದಾರೆ.

1, 2 ಹಾಗೂ 3ನೇ ಪ್ರತಿವಾದಿಯವರು ವಾದಿ ಸಂಘದಿಂದ ಪಡೆಯುವ ಸಾಲವನ್ನು ಕ್ರಮಬದ್ಧವಾಗಿ ಮರುಪಾವತಿ ಮಾಡುತ್ತೇವೆಂದು ಜಂಟಿಯಾಗಿ ಸಾಲದ ಕರಾರು ಪತ್ರದಲ್ಲಿ ಬರೆದುಕೊಟ್ಟಿದ್ದು, ಇಲ್ಲದಿದ್ದ ಪಕ್ಷದಲ್ಲಿ ತಮ್ಮ ವೇತನದಿಂದ ಹಾಗೂ ತಾವು ಪಡೆಯುವ ಸವಲತ್ತು (ಗಳಿಕೆ ರಜೆ, ನಗದೀಕರಣ, ಬೋನಸ್ ಮತ್ತು ಗ್ರ್ಯಾಚುಟಿ)ಗಳಿಂದ ಬರುವ ಹಣವನ್ನು, ವೇತನ ಸವಲತ್ತುಗಳನ್ನು ನೀಡುವ 6ನೇ ಪ್ರತಿವಾದಿ ಅಧಿಕಾರಿಗಳಿಂದ ವಸೂಲಿ ಮಾಡಿಕೊಳ್ಳಬಹುದೆಂದು ಕರಾರು ಬರೆದು ಕೊಟ್ಟಿರುತ್ತಾರೆ.

1 ಹಾಗೂ 3ನೇ ಪ್ರತಿವಾದಿಗಳು ಸಾಲ ತೀರುವಳಿ ಮಾಡದೇ ಸುಸ್ತಿದಾರರಾಗಿದ್ದು, ಸಾಲ ವಸೂಲಾತಿಗಾಗಿ ದಾವೆ ಹೂಡಲಾಗಿದೆಯೆಂದು, 1ನೇ ಪ್ರತಿವಾದಿಯು 6ನೇ ಪ್ರತಿವಾದಿ ರೈಲ್ವೇ ಇಲಾಖೆಯ ಸೇವೆಯಿಂದ ದಿನಾಂಕ : 31–05–2016 ರಂದು ನಿವೃತ್ತಿ ಹೊಂದುತ್ತಿರುವ ಕಾರಣ ದಾವೆಯನ್ನು ದಾಖಲಿಸಿ 1ನೇ ಪ್ರತಿವಾದಿಗೆ ನೀಡಬಹುದಾದ ಸೇವಾಸವಲತ್ತುಗಳ ಹಣದಿಂದ ₹. 2,58,713/–ಗಳನ್ನು ವಸೂಲಿ ಮಾಡುವುದಕ್ಕಾಗಿ ತೀರ್ಪು ಪೂರ್ವ ಜಪ್ತಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಸಂಘದ ಪರವಾಗಿ ವಾದಿಯ ಮಧ್ಯಂತರ ಅರ್ಜಿಯ ಬಗ್ಗೆ ವಾದವನ್ನು ಆಲಿಸಲಾಯಿತು. 1ನೇ ಪ್ರತಿವಾದಿಯು ಸ್ವಯಂ ಸಾಲಕ್ಕೆ ಮತ್ತು 3ನೇ ಪ್ರತಿವಾದಿಯ ಸಾಲಕ್ಕೆ ಜಾಮೀನುದಾರನಾಗಿ ಜವಾಬ್ದಾರನಾಗಿರುವುದರಿಂದ 1ನೇ ಪ್ರತಿವಾದಿಯ ನಿವೃತ್ತಿ ಸೇವಾ ಸೌಲಭ್ಯದ ಹಣದಲ್ಲಿ ವಾದಿ ಸಂಘವು ಅರ್ಜಿಯಲ್ಲಿ ಕೋರಿರುವ ಹಣವನ್ನು ತೀರ್ಪು ಪೂರ್ವ ಜಪ್ತಿ ಆದೇಶ ನೀಡಬೇಕೆಂದೂ ನಿವೃತ್ತಿ ಹಣವನ್ನು ಪಡೆದುಕೊಂಡು ಹೋದಲ್ಲಿ ವಾದಿ ಸಂಘಕ್ಕೆ ಸಾಲದ ಹಣವನ್ನು ವಸೂಲು ಮಾಡಲು ಸಾಧ್ಯವಾಗುವುದಿಲ್ಲವೆಂದೂ ಒಂದು ವೇಳೆ ತೀರ್ಪು ಪೂರ್ವ ಜಪ್ತಿ ಆದೇಶ ನೀಡದಿದ್ದಲ್ಲಿ ಈ ದಾವೆಯಲ್ಲಿ ಮುಂದೆ ಪ್ರತಿವಾದಿಯ ವಿರುದ್ಧ ಡಿಕ್ರಿ ನೀಡಿದರೂ ಅದನ್ನು ಜಾರಿ ಮಾಡಲು ಸಾಧ್ಯವಿಲ್ಲದಂತಾಗುವುದೆಂಬ ವಾದಿಯ ಕೋರಿಕೆ ಪರಿಗಣಿಸಿ, ಒಂದನೇ ಪ್ರತಿವಾದಿಗೆ 6ನೇ ಪ್ರತಿವಾದಿ ನೀಡಬಹುದಾದ ಸೇವಾ ಸೌಲಭ್ಯ ಹಣದಲ್ಲಿ ₹. 2,58,713/–ಗಳ ಹಣವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103ರ ರೀತ್ಯಾ ತೀರ್ಪು ಪೂರ್ವ ಜಪ್ತಿ ಆದೇಶದ ನೋಟೀಸ್ ನೀಡುವುದು ಸೂಕ್ತವೆಂದು ಪರಿಗಣಿಸಿ ಈ ನೋಟೀಸ್ ಹೊರಡಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103 ರಡಿ ಷರತ್ತಿಗೊಳಪಟ್ಟು ತೀರ್ಪುಪೂರ್ವ ಜಪ್ತಿ ಆದೇಶದ ನೋಟೀಸ್

ವಾದಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಷರತ್ತುಬದ್ಧವಾಗಿ ಪುರಸ್ಕರಿಸಲಾಗಿದೆ. 1ನೇ ಪ್ರತಿವಾದಿಗೆ ನೀಡಬಹುದಾದ ಸೇವಾ ಸೌಲಭ್ಯ ಹಣದಲ್ಲಿ ₹. 2,58,713/–ಗಳ ಹಣವನ್ನು ಈ ಮೇಲಿನ ದಾವಾ ಇತ್ಯರ್ಥವಾಗುವವರೆಗೂ ತೀರ್ಪು ಪೂರ್ವ ಜಪ್ತಿ ಆದೇಶವನ್ನು ಹೊರಡಿಸಿ 6ನೇ ಪ್ರತಿವಾದಿಗೆ ಈ ಮೂಲಕ ನಿರ್ದೇಶಿಸಿ ಆದೇಶಿಸಲಾಗಿದೆ.

1ನೇ ಪ್ರತಿವಾದಿಯು ಈ ನೋಟೀಸ್ ಅನ್ನು ಹಿಂಪಡೆಯಲು ಇಚ್ಛಿಸಿದಲ್ಲಿ ವಾದಿ ಸಂಘಕ್ಕೆ ಪೂರ್ಣ ಸಾಲ ಮತ್ತು ತಹಲ್‌ವರೆಗಿನ ಬಡ್ಡಿಯನ್ನು ಪಾವತಿಸಿದ ರಸೀದಿ ದಾಖಲೆಗಳನ್ನು ನೋಟೀಸು ಪಡೆದು 30 ದಿವಸಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು ಅಥವಾ ದಾವಾ ಮೊತ್ತಕ್ಕೆ ಅನುಗುಣವಾಗಿ ವಾದಿ ಸಂಘದಲ್ಲಿ ಠೇವಣಿ ಇಡುವುದು ಅಥವಾ ಈ ಮೊತ್ತಕ್ಕೆ ಅನುಗುಣವಾಗಿ ಸ್ಥಿರಾಸ್ತಿಯನ್ನು ಭದ್ರತೆಯನ್ನಾಗಿ ಒದಗಿಸತಕ್ಕದ್ದು, ತಪ್ಪಿದ್ದಲ್ಲಿ ಈ ಆದೇಶವನ್ನು ಮುಂದಿನ ಅನುಸರಣಾ ಕ್ರಮಗಳಿಗೆ ಸ್ಥಿರೀಕರಿಸಲಾಗುವುದೆಂದು ಈ ಮೂಲಕ ಪ್ರತಿವಾದಿಗಳಿಗೆ ಆದೇಶಿಸಿದೆ. ₹. 2,58,713/–ಗಳನ್ನು ವಾದಿ ಸಂಘದಲ್ಲಿ ಪಾವತಿ ಮಾಡಿ ರಶೀದಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿದಲ್ಲಿ ಈ ಷರತ್ತುಬದ್ದ ಆದೇಶವನ್ನು ಹಿಂಪಡೆಯಲು ಅವಕಾಶವಿರುತ್ತದೆ, ಇಲ್ಲದಿದ್ದ ಪಕ್ಷದಲ್ಲಿ ಈ ಆದೇಶವನ್ನು ಸ್ಥಿರೀಕರಿಸಲಾಗುವುದು.

ತೀರ್ಪು ಪೂರ್ವ ಜಪ್ತಿ ಆದೇಶಕ್ಕೆ ಒಳಪಡುವ ವಿವರ

6ನೇ ಪ್ರತಿವಾದಿಯು 1ನೇ ಪ್ರತಿವಾದಿಗೆ ನೀಡಬೇಕಾದ ನಿವೃತ್ತಿ ಸೌಲಭ್ಯಗಳಲ್ಲಿ ₹. 2,58,713/– ಗಳನ್ನು (ಎರಡು ಲಕ್ಷದ ಐವತ್ತೆಂಟು ಸಾವಿರದ ಏಳುನೂರ ಹದಿಮೂರು ₹.ಗಳು ಮಾತ್ರ) ಒಳಗೊಂಡಿರುತ್ತದೆ.

ಈ ಮೇಲಿನ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿ ಮುದ್ರೆಯೊಂದಿಗೆ ದಿನಾಂಕ : 30–05–2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಿ ಆದೇಶಿಸಿರುತ್ತೇನೆ.

PR - 519 ಸಹಕಾರ ಸಂಘಗಳ ಅಪರ ನಿಬಂಧಕರು,

SC - 05 (ವಸತಿ ಮತ್ತು ಇತರೆ)

ಕೃಷಿ ಮಾರಾಟ ಇಲಾಖೆ
ಅಧಿಸೂಚನೆ

ಸಂ:ಕೃಮಾಇ/ನಿಯವಿ/ಮುಮಾಪ್ರಾಂ/171/15-16 ಬೆಂಗಳೂರು, ದಿನಾಂಕ: 15/06/2016

ಕರ್ನಾಟಕ ಸರ್ಕಾರವು ಅಧಿಸೂಚನೆ ಸಂ: ಸಇ/541/ಎಂಆರ್ಇ/2015, ದಿ:11/05/2016ರ ಮೂಲಕ ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳಿಗೆ ಕೊಪ್ಪ ಮಾರುಕಟ್ಟೆ ಕ್ಷೇತ್ರವನ್ನು ಮತ್ತು ಶೃಂಗೇರಿ ತಾಲ್ಲೂಕಿಗೆ ಶೃಂಗೇರಿ ಮಾರುಕಟ್ಟೆ ಕ್ಷೇತ್ರವನ್ನು ರಚಿಸಿದೆ.

ಆದುದರಿಂದ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಪ್ರಕರಣ 6(2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆ ಸಂ:ಕೃಮಾಇ/ನಿಯವಿ/2001(1), ದಿ:09/08/2001 ಮಾರ್ಪಡಿಸಿ ಕರ್ನಾಟಕದಲ್ಲಿನ ಕೃಷಿ ಮಾರಾಟ ನಿರ್ದೇಶಕನಾಗಿರುವ ಜಿ.ಎನ್. ಶಿವಮೂರ್ತಿ ಆದ ನಾನು, ವಿಭಜಿತ ಕೊಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರದಲ್ಲಿ ಸರ್ಕಾರದ ಅಧಿಸೂಚನೆ ಸಂ:ಸ ಇ/541/ಎಂಆರ್ಇ/2015, ದಿ:11/05/2016ರ ಅನುಸೂಚಿ-4ನೇ ಅಂಕಣದಲ್ಲಿ ನಮೂದಿಸಿರುವ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ **ಕೊಪ್ಪ** ಪಟ್ಟಣ ಪರಿಮಿತಿಯೊಳಗಿನ ಪ್ರದೇಶವನ್ನು **ಮಾರುಕಟ್ಟೆ** ಎಂದು ಹಾಗೂ ಈ ಕೆಳಗಿನ ಅನುಸೂಚಿ-ಎ ಯಲ್ಲಿ ನಮೂದಿಸಿರುವ ಸ್ಥಳವನ್ನು **ಮಾರುಕಟ್ಟೆ ಪ್ರಾಂಗಣ**ವೆಂದು ಹಾಗೂ ನರಸಿಂಹರಾಜಪುರ ಪಟ್ಟಣ ಪರಿಮಿತಿಯೊಳಗಿನ ಪ್ರದೇಶವನ್ನು ಉಪ ಮಾರುಕಟ್ಟೆ ಎಂದು ಹಾಗೂ ಅನುಸೂಚಿ-ಬಿ ರಲ್ಲಿ ನಿಗಧಿಪಡಿಸಿರುವ ಸ್ಥಳವನ್ನು **ಉಪ ಮಾರುಕಟ್ಟೆ ಪ್ರಾಂಗಣ** ಎಂದು ಈ ಮೂಲಕ ಘೋಷಿಸಿದ್ದೇನೆ.

ಕೃಷಿ ಉತ್ಪನ್ನಗಳು

1. ಜಾನುವಾರುಗಳು, 2. ಮೇಕೆಗಳು, 3. ಕುರಿಗಳು, 4. ಹತ್ತಿ (ಬೀಜ ತೆಗೆದ ಮತ್ತು ತೆಗೆಯದ) 5. ಎಲ್ಲಾ ಹೂ.ಗಳು, 6. ಸಜ್ಜೆ, 7 ಜವೆ ಗೋಧಿ, 8. ಜೋಳ, 9. ಕಂಬು, 10. ಮೆಕ್ಕೆಜೋಳ, 11. ನವಣೆ, 12. ಭತ್ತ. 13. ರಾಗಿ, 14. ಅಕ್ಕಿ. 15. ಸಾಮೆ (ಸಾವೆ), 16. ಗೋಧಿ, 17. ಅಂಟುವಾಳ, 18. ಬೊಂಬು. 19. ಬೆತ್ತ. 20. ಹಿಪ್ಪೆಬೀಜ, 21. ಹೊಂಗೆಬೀಜ, 22. ಬೇವಿನಬೀಜ. 23.ಸೀಗೇಕಾಯಿ, 24. ಹುಣಸೇಹಣ್ಣು, 25. ಹುಣಸೇಬೀಜ, 26. ಸೇಬು, 27. ಬಾಳೇಹಣ್ಣು, 28. ಬೋರೇಹಣ್ಣು, 29. ಹುಳಿಹಣ್ಣುಗಳು, 30. ಚಕ್ಕೋತ ಹಣ್ಣು, 31. ಪೇರಲೆಹಣ್ಣು (ಸೀಬೆಹಣ್ಣು), 32. ದ್ರಾಕ್ಷಿ, 33. ಹಲಸಿನಹಣ್ಣು, 34. ಜಂಬುನೇರಳೆಹಣ್ಣು, 35. ನಿಂಬೆಹಣ್ಣು, 36. ಕರಬೂಜ, 37. ಮಾವಿನಹಣ್ಣು, 38. ಮೂಸಂಬಿ. 39. ಮರಸೇಬು, 40. ಪೈನಾಪಲ್ (ಅನಾನಸ್), 41. ಪಪ್ಪಾಯಿಹಣ್ಣು (ಪರಂಗಿಹಣ್ಣು), 42. ದಾಳಿಂಬೆಹಣ್ಣು, 43. ಸಪೋಟಾ, 44 ಸಿದ್ದೋಟ, 45. ಕಿತ್ತಳೆ 46. ಕಲ್ಲಂಗಡಿ, 47. ನೆಲಗಡಲೆ (ಶೇಂಗಾ) (ಕಾಯಿ ಮತ್ತು ಬೀಜ), 48 ಹರಳುಬೀಜ. 49. ಹತ್ತಿಬೀಜ, 50. ಅಗಸೆಬೀಜ, 51. ಸಾಸುವೆ, 52. ಹುಚ್ಚೆಳ್ಳು, 53. ಕುಸುಬೆ, 54. ಎಳ್ಳು, 55. ಸೂರ್ಯಕಾಂತಿಬೀಜ, 56. ಸೋಯಾಬಿನ್, 57. ಅಡಿಕೆ, 58. ಗೋಡಂಬಿಬೀಜ, 59. ಒಣಮೆಣಸಿನಕಾಯಿ, 60. ತೆಂಗಿನಕಾಯಿ, 61. ಕೊಬ್ಬರಿ, 62. ಕೊತ್ತಂಬರಿಬೀಜ (ಧನಿಯಾ), 63. ಬೆಳ್ಳುಳ್ಳಿ. 64 ಶುಂಠಿ, 65 ಮೆಂತ್ಯ, 66. ಕಾಳುಮೆಣಸು, 67. ಅರಿಶಿನ 68. ಅಲಸಂದೆ (ಇಡೀ ಮತ್ತು ಒಡೆದ), 69. ಅವರೆ (ಇಡೀ ಮತ್ತು ಒಡೆದ), 70. ಕಡಲೆ (ಇಡೀ ಮತ್ತು ಒಡೆದ), 71. ಉದ್ದು (ಇಡೀ ಮತ್ತು ಒಡೆದ) 72. ಬುಲ್ಲರ್ (ಇಡೀ ಮತ್ತು ಒಡೆದ), 73. ಹೆಸರು (ಇಡೀ ಮತ್ತು ಒಡೆದ) 74. ಹುರಳಿ, 75. ಲಾಕ್ (ಇಡೀ ಮತ್ತು ಒಡೆದ) 76. ಮಡಿಕೆ (ಮಟಕಿ) (ಇಡೀ ಮತ್ತು ಒಡೆದ) 77. ಚೆನ್ನಂಗಿ (ಮಸೂರಿ) ಇಡೀ ಮತ್ತು ಒಡೆದ), 78. ಬಟಾಣಿ 79. ತೊಗರಿ (ಇಡೀ ಮತ್ತು ಒಡೆದ) 80. ಮೋಠ್ (ಇಡೀ ಮತ್ತು ಒಡೆದ). 81. ಎಲ್ಲಾ ತರಕಾರಿಗಳು (ಸೊಪ್ಪುಗಳು ಸೇರಿಸಿ) (ಗರ್ಕಿನ್) ಹೊರತುಪಡಿಸಿ), 82. ಕಾಯಿಗಳು, 83. ಹಸಿರುಮೆಣಸಿನಕಾಯಿ, 84. ಈರುಳ್ಳಿ. 85. ಆಲೂಗಡ್ಡೆ. 86. ಸುವರ್ಣಗಡ್ಡೆ, 87. ಸಿಹಿಗೆಣಸು (ಗೆಣಸು), 88. ಟಮ್ಯಾಟೋ, 89. ವೀಳ್ಯೆದೆಲೆ. 90. ಬೆಲ್ಲ. 91. ತೆಂಗಿನಕಡ್ಡಿ, 92. ಒಣದ್ರಾಕ್ಷಿ.

ಅನುಸೂಚಿ-ಎ

ಕೊಪ್ಪ ಪಟ್ಟಣ ಪರಿಮಿತಿಯೊಳಗೆ ಹಾಲಿ ವ್ಯಾಪಾರ ನಡೆಯುವ 10 ಎಕರೆ ಪ್ರದೇಶದ ಈ ಕೆಳಗಿನ ಸೀಮಾಬದ್ಧ ಸ್ಥಳ:

ಪೂರ್ವಕ್ಕೆ : ಮಾರ್ಕೆಟ್ ರಸ್ತೆಗೆ ಮತ್ತು ಗುಣವಂತೆ ರಸ್ತೆಗೆ ಸಂಪರ್ಕಿಸುವ ಸುಭಾಶ್ ರಸ್ತೆ.

ಪಶ್ಚಿಮಕ್ಕೆ : ಟೌನ್ ಮುನಿಸಿಪಾಲಿಟಿಯ ನೀರಿನ ಟ್ಯಾಂಕ್ ಮತ್ತು ಪಂಪ್‌ಹೌಸ್‌ನಿಂದ ಪ್ರಾರಂಭಗೊಂಡು ವೀರಭದ್ರೇಶ್ವರ ಸ್ವಾಮಿ ದೇವಸ್ಥಾನವನ್ನು ಸಂಪರ್ಕಿಸುವ ಟಿ.ಎಂ. ರಸ್ತೆ.

ಉತ್ತರಕ್ಕೆ : ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ರಸ್ತೆಗೆ ಸಂಪರ್ಕಿಸುವ ಗುಣವಂತೆ ರಸ್ತೆ.

ದಕ್ಷಿಣಕ್ಕೆ : ಭಾರತ್ ರೈಸ್ ಮಿಲ್‌ನಿಂದ ಪ್ರಾರಂಭವಾಗಿ ಸುಭಾಶ್ ರಸ್ತೆ ಸಂಪರ್ಕಿಸುವ ಟಿ.ಎಂ. ರಸ್ತೆ.

ಅನುಸೂಚಿ-ಬಿ

ನರಸಿಂಹರಾಜಪುರ ಪಟ್ಟಣ ಪರಿಮಿತಿಯೊಳಗೆ ಹಾಲಿ ವ್ಯಾಪಾರ ನಡೆಯುತ್ತಿರುವ ಈ ಕೆಳಗಿನ ಸೀಮಾಬದ್ಧ ಸ್ಥಳ :

ಪೂರ್ವಕ್ಕೆ : ಪ್ರವಾಸ ಮಂದಿರ.

ಪಶ್ಚಿಮಕ್ಕೆ : ತಾಲ್ಲೂಕು ಕಛೇರಿ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ರಾಂಚ್.

ಉತ್ತರಕ್ಕೆ : ಶಿವಾನಂದ ರೈಸ್ ಮಿಲ್.

ದಕ್ಷಿಣಕ್ಕೆ : ಪರಮೇಶ್ವರ ರೈಸ್ ಮಿಲ್, ಮಂಜುನಾಥ ರೈಸ್ ಮಿಲ್, ಗುಬ್ಬಿಗೇರ್ ರೈಸ್ ಮಿಲ್, ವೆಂಕಟೇಶ್ವರ ರೈಸ್ ಮಿಲ್.

ಜಿ.ಎನ್. ಶಿವಮೂರ್ತಿ
ನಿರ್ದೇಶಕರು

P.R.529
SC.30

ಕೃಷಿ ಮಾರಾಟ ಇಲಾಖೆ
ಅಧಿಸೂಚನೆ

ಸಂ:ಕೃಮಾಇ/ನಿಯವಿ/ಮುಮಾಪ್ರಾಂ/171/15-16 ಬೆಂಗಳೂರು, ದಿನಾಂಕ: 15/06/2016

ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಸಇ:/541/ಎಂಆರ್ಇ/2015, ದಿ:11/05/2016ರ ಮೂಲಕ ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳಿಗೆ ಕೊಪ್ಪ ಮಾರುಕಟ್ಟೆ ಕ್ಷೇತ್ರವನ್ನು ಮತ್ತು ಶೃಂಗೇರಿ ತಾಲ್ಲೂಕಿಗೆ ಶೃಂಗೇರಿ ಮಾರುಕಟ್ಟೆ ಕ್ಷೇತ್ರವನ್ನು ರಚಿಸಿದೆ.

ಆದುದರಿಂದ, ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಪ್ರಕರಣ 6(2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆ ಸಂ:ಕೃಮಾಇ/92/ನಿಯವಿ/2001(2), ದಿ:09/08/2001 ಮಾರ್ಪಡಿಸಿ ಕರ್ನಾಟಕದಲ್ಲಿನ ಕೃಷಿ ಮಾರಾಟ ನಿರ್ದೇಶಕನಾಗಿರುವ ಜಿ.ಎನ್.ಶಿವಮೂರ್ತಿ ಆದ ನಾನು, ವಿಭಜಿತ ಶೃಂಗೇರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರದಲ್ಲಿ ಸರ್ಕಾರದ ಅಧಿಸೂಚನೆ ಸಂ:ಸಇ/541/ಎಂಆರ್ಇ/2015, ದಿ:11/05/2016ರ ಅನುಸೂಚಿ-4ನೇ ಅಂಕಣದಲ್ಲಿ ನಮೂದಿಸಿರುವ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ ಶೃಂಗೇರಿ ಪಟ್ಟಣ ಪರಿಮಿತಿಯೊಳಗಿನ ಪ್ರದೇಶವನ್ನು **ಮಾರುಕಟ್ಟೆ** ಎಂದು ಹಾಗೂ ಈ ಕೆಳಗಿನ ಅನುಸೂಚಿ-ಎ ಯಲ್ಲಿ ನಮೂದಿಸಿರುವ ಸ್ಥಳವನ್ನು **ಮಾರುಕಟ್ಟೆ ಪ್ರಾಂಗಣ ಎಂದು** ಈ ಮೂಲಕ ಘೋಷಿಸಿದ್ದೇನೆ.

ಕೃಷಿ ಉತ್ಪನ್ನಗಳು

1. ಜಾನುವಾರುಗಳು, 2. ಮೇಕೆಗಳು, 3. ಕುರಿಗಳು, 4. ಹತ್ತಿ (ಬೀಜ ತೆಗೆದ ಮತ್ತು ತೆಗೆಯದ), 5. ಎಲ್ಲಾ ಹೂ.ಗಳು, 6. ಸಜ್ಜೆ, 7. ಜವೆ ಗೋಧಿ 8. ಜೋಳ, 9. ಕಂಬು, 10. ಮೆಕ್ಕೆಜೋಳ, 11. ನವಣೆ, 12. ಭತ್ತ, 13. ರಾಗಿ, 14. ಅಕ್ಕಿ. 15. ಸಾಮೆ (ಸಾವೆ), 16. ಗೋಧಿ, 17. ಅಂಟುವಾಳ, 18. ಬೊಂಬು. 19. ಬೆತ್ತ. 20. ಹಿಪ್ಪೆಬೀಜ, 21. ಹೊಂಗೆಬೀಜ, 22. ಬೇವಿನಬೀಜ. 23. ಸೀಗೇಕಾಯಿ, 24. ಹುಣಸೇಹಣ್ಣು, 25. ಹುಣಸೇಬೀಜ, 26. ಸೇಬು, 27. ಬಾಳೇಹಣ್ಣು, 28. ಬೋರೇಹಣ್ಣು, 29. ಹುಳಿಹಣ್ಣುಗಳು, 30. ಚಕ್ಕೋತನ ಹಣ್ಣು, 31. ಪೇರಲೆಹಣ್ಣು (ಸೀಬೆಹಣ್ಣು), 32. ದ್ರಾಕ್ಷಿ, 33. ಹಲಸಿನಹಣ್ಣು, 34. ಜಂಬುನೇರಳೇಹಣ್ಣು, 35. ನಿಂಬೆಹಣ್ಣು, 36. ಕರಬೂಜ, 37. ಮಾವಿನಹಣ್ಣು, 38. ಮೂಸಂಬಿ. 39. ಮರಸೇಬು, 40. ಪೈನಾಪಲ್ (ಅನಾನಸ್), 41. ಪಪ್ಪಾಯಿಹಣ್ಣು (ಪರಂಗಿಹಣ್ಣು), 42. ದಾಳಿಂಬೆಹಣ್ಣು, 43. ಸಪೋಟಾ, 44 ಸಿದ್ದೋಟ, 45. ಕಿತ್ತಳೆ 46. ಕಲ್ಲಂಗಡಿ, 47. ನೆಲಗಡಲೆ (ಶೇಂಗಾ) (ಕಾಯಿ ಮತ್ತು ಬೀಜ), 48 ಹರಳುಬೀಜ. 49. ಹತ್ತಿಬೀಜ, 50. ಅಗಸೆಬೀಜ, 51. ಸಾಸುವೆ, 52. ಹುಚ್ಚೆಳ್ಳು, 53. ಕುಸುಬೆ, 54.ಎಳ್ಳು, 55. ಸೂರ್ಯಕಾಂತಿಬೀಜ, 56.ಸೋಯಾಬಿನ್, 57. ಅಡಿಕೆ, 58. ಗೋಡಂಬಿಬೀಜ, 59. ಒಣಮೆಣಸಿನಕಾಯಿ, 60. ತೆಂಗಿನಕಾಯಿ, 61. ಕೊಬ್ಬರಿ, 62. ಕೊತ್ತಂಬರಿಬೀಜ (ಧನಿಯಾ), 63. ಬೆಳ್ಳುಳ್ಳಿ, 64 ಶುಂಠಿ, 65 ಮೆಂತ್ಯ, 66. ಕಾಳುಮೆಣಸು, 67. ಅರಿಶಿನ 68. ಅಲಸಂದೆ (ಇಡೀ ಮತ್ತು ಒಡೆದ), 69. ಅವರೆ (ಇಡೀ ಮತ್ತು ಒಡೆದ), 70. ಕಡಲೆ (ಇಡೀ ಮತ್ತು ಒಡೆದ), 71. ಉದ್ದು (ಇಡೀ ಮತ್ತು ಒಡೆದ) 72. ಬುಲ್ಲರ್ (ಇಡೀ ಮತ್ತು ಒಡೆದ), 73. ಹೆಸರು (ಇಡೀ ಮತ್ತು ಒಡೆದ) 74. ಹುರಳಿ, 75. ಲಾಕ್ (ಇಡೀ ಮತ್ತು ಒಡೆದ) 76. ಮಡಿಕೆ (ಮಟಕಿ) ಇಡೀ ಮತ್ತು ಒಡೆದ 77. ಚೆನ್ನಂಗಿ (ಮಸೂರಿ) ಇಡೀ ಮತ್ತು ಒಡೆದ), 78. ಬಟಾಣಿ, 79. ತೊಗರಿ (ಇಡೀ ಮತ್ತು ಒಡೆದ), 80. ಮೋತ್ (ಇಡೀ ಮತ್ತು ಒಡೆದ), 81. ಎಲ್ಲಾ ತರಕಾರಿಗಳು (ಸೊಪ್ಪುಗಳು ಸೇರಿಸಿ) ಗರ್ಕಿನ್ ಹೊರತುಪಡಿಸಿ), 82. ಕಾಯಿಗಳು, 83. ಹಸಿರುಮೆಣಸಿನಕಾಯಿ, 84. ಈರುಳ್ಳಿ. 85. ಆಲೂಗಡ್ಡೆ, 86. ಸುವರ್ಣಗಡ್ಡೆ, 87. ಸಿಹಿಗೆಣಸು (ಗೆಣಸು), 88. ಟಮ್ಯಾಟೋ, 89. ವೀಳ್ಯೆದೆಲೆ. 90. ಬೆಲ್ಲ. 91. ತೆಂಗಿನಕಡ್ಡಿ, 92. ಒಣದ್ರಾಕ್ಷಿ.

ಅನುಸೂಚಿ-ಎ

ಶೃಂಗೇರಿ : ಪಟ್ಟಣ ಪರಿಮಿತಿಯೊಳಗೆ ಹಾಲಿ ವ್ಯಾಪಾರ ನಡೆಯುವ ಈ ಕೆಳಗಿನ ಸೀಮಾಬದ್ಧ ಸ್ಥಳ:

ಪೂರ್ವಕ್ಕೆ: ತುಂಗಾ ನದಿ.
ಪಶ್ಚಿಮಕ್ಕೆ : ಮಲ್ಲಾರ ಗದ್ದೆ
ಉತ್ತರಕ್ಕೆ : ರಸ್ತೆ, ಶೃಂಗೇರಿ ಮಠದ ಆಸ್ಪತ್ರೆ ಮತ್ತು ಪ್ರವಾಸ ಮಂದಿರ.
ದಕ್ಷಿಣಕ್ಕೆ : ಮಠದ ಗದ್ದೆ ಮತ್ತು ತುಂಗಾ ನದಿ.

ಜಿ.ಎನ್. ಶಿವಮೂರ್ತಿ
ನಿರ್ದೇಶಕರು

P.R.530
SC.30

OFFICE OF THE CITY CIVIL COURT BENGALURU
NOTIFICATION

No. ADM-I (E) 1558 /2016 Bengaluru Dated: June 8, 2016

Smt. K.P. Saroja, Asst. Registrar, City Civil Court, Bengaluru, is permitted to surrender earned leave for 15 days as on 4.4.2016 for the encashment benefit for the calender year 2016 and the balance of earned leave as on 4.4.2016 is 187 days.

She shall be paid pay and allowances admissible for the period of leave so surrendered at the rate of $1/30^{th}$ of the monthly pay and allowances for each day of leave surrendered as per the provisions contained in G.O. No. FD 3 SRS 95, dated 27.3.1995 and G.O. No.FD SRS 2000 dated 26.12.2000 and addendum dated 28.3.2001 to that G.O. and G.O. No. FD 8 SENISE 2015 DT. 10.12.2015.

BY ORDER OF THE PRL. CITY CIVIL & SESSIONS JUDGE

Registrar
City Civil Court, Bengaluru

PR 531

ಕಂದಾಯ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಕಂಇ 464 ಬಿಎಂಎಂ 2015. ಬೆಂಗಳೂರು, ದಿನಾಂಕ 27.05.2016

ಸರ್ಕಾರದ ಅಧಿಕೃತ ಜ್ಞಾಪನ ಸಂ: ಕಂಇ 170 ಬಿಎಂಎಂ 2013, ದಿ: 25–07–2014 ರಂದು ರಾಜ್ಯ ಮಟ್ಟದ ಶಿರಸ್ತೇದಾರರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 01–01–1997 ರಿಂದ 31–12–2009 ರವರೆಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಳಿಸಿದ್ದು, ದಿನಾಂಕ 25–07–2014 ರಂದು ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ವ್ಯತ್ಯಾಸಗಳ ಕಾರಣಾಂತರಗಳಿಂದಾಗಿ ಶಿರಸ್ತೇದಾರರ ಹೆಸರನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಲಾಗಿದೆ.

ವಿಭಾಗ ಮಟ್ಟದ ಶಿರಸ್ತೇದಾರ್ ಜೇಷ್ಠತಾ ಪಟ್ಟಿಯಲ್ಲಿನ ಕ್ರಮ ಸಂಖ್ಯೆ	ರಾಜ್ಯಮಟ್ಟದ ಶಿರಸ್ತೇದಾರ್ ಜೇಷ್ಠತಾ ಸಂಖ್ಯೆ	ನೌಕರರ ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ	ಎಸ್.ಸಿ/ ಎಸ್.ಟಿ/ ಸಾಮಾನ್ಯ	ವಿಭಾಗ	ಜನ್ಮ ದಿನಾಂಕ	ನೌಕರರು ಸೇವೆಗೆ ಸೇರಿದ ದಿನಾಂಕ	ಬಡ್ತಿ ವಾಸ್ತವಿಕ ದಿನಾಂಕ	ಅರ್ಹತಾ ದಿನಾಂಕ
503(ಇ)	7040ಎ–1	ಶ್ರೀ ಜೆ.ಬಿ.ಮಜ್ಜಿಗೆ	ಸಾಮಾನ್ಯ	ಬೆಳಗಾವಿ	18.06.1969	02.01.1989	10.02.2010	10.04.2005
503(ಎಫ್)	7040ಬಿ	ಶ್ರೀ ಎಂ.ಆರ್. ಕುಲಕರ್ಣಿ	ಸಾಮಾನ್ಯ	ಬೆಳಗಾವಿ	10.04.1967	08.08.1989	10.02.2010	10.04.2005
503 (ಜಿ)	7040ಸಿ	ಶ್ರೀ ಪಿ.ವಿ. ಪಾಟೀಲ್	ಸಾಮಾನ್ಯ	ಬೆಳಗಾವಿ	04.04.1975	27.01.2000	10.02.2010	10.04.2005
1569 (ಎ)	7040ಡಿ	ಶ್ರೀ ಜಿ.ಬಿ. ಜಕ್ಕನಗೌಡರ	ಸಾಮಾನ್ಯ	ಬೆಳಗಾವಿ	01.06.1968	01.04.1991	10.02.2010	10.04.2005
503 (ಹೆಚ್)	7040ಇ	ಶ್ರೀ ಪಿ.ಸಿ. ಹುಚ್ಚಣ್ಣವರ್	ಸಾಮಾನ್ಯ	ಬೆಳಗಾವಿ	24.09.1978	05.12.2000	10.02.2010	10.04.2005

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎಸ್. ಶ್ರೀನಿವಾಸ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–1)

P.R.532

S.C. 25

ಕಂದಾಯ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ಕಂಇ 373 ಬಿಎಂಎಂ 2015. ಬೆಂಗಳೂರು, ದಿನಾಂಕ 22.03.2016

ರಾಜ್ಯ ಮಟ್ಟದ ಶಿರಸ್ತೇದಾರ್ ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಜೇಷ್ಠತೆಯನ್ನು ಸರಿಪಡಿಸುವಂತೆ ಕೋರಿ ಶ್ರೀ ಎಸ್.ಬಿ. ಕೂಡಲಗಿ ಶಿರಸ್ತೇದಾರ್ ರವರು ಕೆ.ಎ.ಟಿ. ಯಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ: 8169/2015ನ್ನು ಪರಿಗಣಿಸಿದ ಕೆ.ಎ.ಟಿ.ಯು ದಿ:3.11.2015 ರ ಆದೇಶದಲ್ಲಿ ಅವರ ಮನವಿಯನ್ನು ನಿಯಮಾನುಸಾರ ಪರಿಗಣಿಸಿ ಕ್ರಮ ಕೈಗೊಳ್ಳಲು ಆದೇಶಿಸಿರುತ್ತದೆ. ಸದರಿಯವರು ದಿ: 29.8.2015 ರಂದು ಸಲ್ಲಿಸಿದ ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಯಿತು. ಸರ್ಕಾರದ ಅಧಿಕೃತ ಜ್ಞಾಪನ ಸಂ: ಕಂಇ 170 ಬಿಎಂಎಂ 2013 ದಿ: 25–07–2014 ರಂದು ರಾಜ್ಯ ಮಟ್ಟದ ಶಿರಸ್ತೇದಾರರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 01–01–1997 ರಿಂದ 31–12–2009 ರವರೆಗೆ ಇರುವಂತೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಳಿಸಿದ್ದು, ಅದರಲ್ಲಿ ಶ್ರೀ ಎಸ್.ಬಿ. ಕೂಡಲಗಿರವರ ಜೇಷ್ಠತಾ ಕ್ರಮಾಂಕವನ್ನು 7607 ಎಂದು ಮತ್ತು 25.8.2008ನ್ನು ಅರ್ಹತಾ ದಿನಾಂಕವೆಂದು ನಿಗದಿಪಡಿಸಿದೆ. ಆದರೆ ತದನಂತರದಲ್ಲಿ ಸದರಿಯವರಿಗಿಂತ ಸೇವೆಯಲ್ಲಿ ಕಿರಿಯರಾದ ಶ್ರೀ ಎಂ.ಎನ್. ಬಳಿಗಾರ ಇವರ ಜೇಷ್ಠತೆಯನ್ನು ರಾಜ್ಯಮಟ್ಟದ ಶಿರಸ್ತೇದಾರ್ ವೃಂದದಲ್ಲಿ 7105ಎ ಮತ್ತು ದಿನಾಂಕ: 12.02.2006ನ್ನು ಅರ್ಹತಾ ದಿನಾಂಕವೆಂದು ಮರು ನಿಗದಿಪಡಿಸಿದೆ. ಆದುದರಿಂದ ಈ ಹಿನ್ನೆಲೆಯಲ್ಲಿ ಜೇಷ್ಠತೆಯಲ್ಲಿ ಹಿರಿಯರಾದ ಶೀ ಎಸ್.ಬಿ. ಕೂಡಲಗಿರವರ ಜೇಷ್ಠತೆಯನ್ನು ಈ ಕೆಳಕಂಡಂತೆ ಮಾರ್ಪಡಿಸಿ ಆದೇಶಿಸಿದೆ.

ವಿಭಾಗ ಮಟ್ಟದ ಶಿರಸ್ತೇದಾರ್ ಜೇಷ್ಠತಾ ಪಟ್ಟಿಯಲ್ಲಿನ ಕ್ರಮ ಸಂಖ್ಯೆ	**ರಾಜ್ಯಮಟ್ಟದ ಶಿರಸ್ತೇದಾರ್ ಜೇಷ್ಠತಾ ಸಂಖ್ಯೆ**	**ನೌಕರರ ಹೆಸರು ಮತ್ತು ಹುದ್ದೆ ಶ್ರೀ/ಶ್ರೀಮತಿ**	**ಎಸ್.ಸಿ/ ಎಸ್.ಟಿ/ ಸಾಮಾನ್ಯ**	**ವಿಭಾಗ**	**ಜನ್ಮ ದಿನಾಂಕ**	**ನೌಕರರು ಸೇವೆಗೆ ಸೇರಿದ ದಿನಾಂಕ**	**ಬಡ್ತಿ ವಾಸ್ತವಿಕ ದಿನಾಂಕ**	**ಅರ್ಹತಾ ದಿನಾಂಕ**
692	7105(ಎ1)	ಎಸ್.ಬಿ. ಕೂಡಲಗಿ	ಪ.ಪಂ	ಬೆಳಗಾವಿ	20–07–1975	18–11–1995	12/02/2006	12/02/2006

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎಸ್. ಶ್ರೀನಿವಾಸ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–1)

P.R.533

S.C. 25

ಕಂದಾಯ ಸಚಿವಾಲಯ
ಅಧಿಸೂಚನೆ

ಸಂಖ್ಯೆ: ಕಂಇ 12 ಭೂದಾಸೇ (1) 2016 ಬೆಂಗಳೂರು, ದಿನಾಂಕ: 06.06.2016.

ವಿಷಯ : ಭೂದಾಖಲೆಗಳ ಜಂಟಿ ನಿರ್ದೇಶಕರು ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ 01.01.2016ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ : 1) ಆಯುಕ್ತರು, ಭೂಮಾಪನ ಇಲಾಖೆ ಇವರ ಪತ್ರ ಸಂಖ್ಯೆ: ಎಸ್.ಎಸ್.ಎಲ್.ಆರ್/ಇಎಸ್‌ಟಿ/ಎಡಿಎಂ–15027/1/2016 ದಿನಾಂಕ 05.05.2016.

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಭೂದಾಖಲೆಗಳ ಜಂಟಿ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01.01.2016 ರಲ್ಲಿದ್ದಂತೆ ಇದರೊಂದಿಗೆ ಲಗತ್ತಿಸಿದಂತೆ ಪ್ರಕಟಿಸಲಾಗಿದೆ.

ಈ ಕುರಿತು ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ ಬಾಧಿತರು ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001 ಇವರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಪುಟ್ಟನಂಜಯ್ಯ ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

ಅನುಬಂಧ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಭೂದಾಖಲೆಗಳ ಜಂಟಿ ನಿರ್ದೇಶಕರು ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ ದಿನಾಂಕ: 01.01.2016ರಲ್ಲಿದ್ದಂತೆ

ಕ್ರಸಂ	ಅಧಿಕಾರಿಯ ಹೆಸರು	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಭೂ.ಜಂ.ನಿ. ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ	ಷರಾ
	ಕೃಷ್ಣಮೂರ್ತಿ ಗೋಪಾಲ್	09–03–1956	14–09–1984	06–09–2006	ಹೆಚ್ಚುವರಿ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಹೊಂದಿ ದಿನಾಂಕ: 31.03.2016 ರಂದು ವಯೋ ನಿವೃತ್ತಿ ಹೊಂದಿರುತ್ತಾರೆ.
	ಸೈಯದ್ ಇಲಿಯಾಸ್ ಅಹ್ಮದ್	26–11–1955	28–09–1984	06–09–2006	ದಿನಾಂಕ 30–11–2015 ರಂದು ವಯೋ ನಿವೃತ್ತಿ ಹೊಂದಿರುತ್ತಾರೆ.
1.	ಪಿ. ಬಸವರಾಜು	04–08–1956	27–09–1984	20–02–2009	
	ವಿ.ಪ್ರಸನ್ನಕುಮಾರ್	27–05–1955	03–02–1986	05–04–2012	ದಿನಾಂಕ: 31–05–2015ರಂದು ವಯೋ ನಿವೃತ್ತಿ ಹೊಂದಿರುತ್ತಾರೆ.
2.	ಮಲ್ಲಿಕಾರ್ಜುನಯ್ಯ	01–06–1958	20–07–1987	24–06–2015	ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 12 ಭೂದಾಸೇ (1) 2013. ದಿನಾಂಕ 11.06.2015ರಲ್ಲಿ ಭೂಜಂ.ನಿ ಹುದ್ದೆಗೆ ಮುಂಬಡ್ತಿ ಪಡೆದಿರುತ್ತಾರೆ.
3	ಸಿ.ಎನ್. ಶ್ರೀಧರ್	18–11–1966	28–02–1997	15–06–2015	
4	ಸಿ.ಎಸ್. ರಮೇಶ್	19–11–1964	20–02–1997	24–06–2015	
5	ಕೆ. ಜಯಪ್ರಕಾಶ್	22–05–1967	27–02–1997	18–06–2015	
6	ಕೆ. ವಿ. ರುದ್ರೇಶ್	22–01–1957	03–03–1997	15–06–2015	

P.R.534

ಸಿ. ಪುಟ್ಟನಂಜಯ್ಯ ,
ಸರ್ಕಾರದದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

ಕಂದಾಯ ಸಚಿವಾಲಯ
ಅಧಿಸೂಚನೆ

ಸಂಖ್ಯೆ: ಕಂಇ 10 ಭೂದಾಸೇ(1)2016 ಬೆಂಗಳೂರು, ದಿನಾಂಕ: 10.06.2016

ವಿಷಯ: ಭೂದಾಖಲೆಗಳ ಉಪ ನಿರ್ದೇಶಕರು (ಕಾ.ನಿ). ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ 01.01.2016 ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ: 1) ಆಯುಕ್ತರು, ಭೂಮಾಪನ ಇಲಾಖೆ ಇವರ ಪತ್ರ ಸಂಖ್ಯೆ: ಎಸ್.ಎಸ್.ಎಲ್.ಆರ್/ ಇಎಸ್‌ಟಿ/ಎಡಿಎಂ–15027/2/2016 ದಿನಾಂಕ 06.05.2016.

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಭೂದಾಖಲೆಗಳ ಉಪ ನಿರ್ದೇಶಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01.01.2016 ರಲ್ಲಿದ್ದಂತೆ ಇದರೊಂದಿಗೆ ಲಗತ್ತಿಸಿದಂತೆ ಪ್ರಕಟಿಸಲಾಗಿದೆ.

ಈ ಕುರಿತು ಹೆಸರು, ಜನ್ಮ ದಿನಾಂಕ ಹಾಗೂ ಇತರೆ ವಿಷಯಗಳಿಗೆ ಆಕ್ಷೇಪಣೆಗಳು/ಸಲಹೆಗಳು ಇದ್ದಲ್ಲಿ ಬಾಧಿತರು ಮನವಿಯನ್ನು ಅವಶ್ಯ ದಾಖಲೆಗಳೊಂದಿಗೆ ದ್ವಿಪ್ರತಿಯಲ್ಲಿ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇವರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಪುಟ್ಟನಂಜಯ್ಯ ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಭೂಮಾಪನ)

ಅನುಬಂಧ

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಭೂದಾಖಲೆಗಳ ಉಪ ನಿರ್ದೇಶಕರು ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ ದಿನಾಂಕ: 01.01.2016ರಲ್ಲಿದ್ದಂತೆ

ಕ್ರಸಂ	ಅಧಿಕಾರಿಯ ಹೆಸರು ಶ್ರೀಯುತರು	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಭೂ.ಉ.ನಿ ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ	ಷರಾ
1	ಇ. ಪ್ರಕಾಶ್	15/10/1966	20/02/1997	15/02/2001	
2	ಎಸ್. ರಾಜಾನಾಯಕ್	24/11/1958	6/03/1997	15/02/2001	
3	ಪಿ.ವಿ. ಕುಲಕರ್ಣಿ	22/07/1964	21/02/1997	1/05/2005	
4	ಎಂ.ಎಸ್. ಮರಿಸ್ವಾಮಿಗೌಡ	1/12/1958	28/02/1997	1/05/2005	
5	ಬಿ.ಎಸ್, ವೇಣುಗೋಪಾಲ್	20/07/1963	20/02/1997	18/11/2005	
6	ಜೆ.ಆರ್.ರೂಗಿ	18/07/1963	28/02/1997	18/11/2005	
7	ನಜೀಮುನ್ನೀಸಾ ಪೀರಜಾದೆ	20/06/1965	21/02/1997	18/11/2005	
8	ಜೆ. ವಿಜಯಭವಾನಿ	24/8/1960	28/02/1997	18/11/2005	
9	ಎಸ್. ನಿಸಾರ್ ಅಹಮದ್	7/05/1969	27/02/1997	18/11/2005	
10	ರಾಜಶೇಖರ್ ಹಿರೇಗೌಡರ್ ಬಿ	1/06/1959	6/03/1997	18/11/2005	
11	ಕುಸುಮಾಧರ ಬಿ.ಕೆ.	21/05/1960	27/02/1997	18/11/2005	
12	ಗಡದವರ್ ಜೆ.ಎಸ್.	20/07/1970	3/03/1997	18/11/2005	
13	ಅಜ್ಜಪ್ಪ ವಿ	1/06/1961	24/02/1997	18/11/2005	
14	ಗೋಪಾಲಯ್ಯ ಇ	20/10/1969	5/03/1997	18/11/2005	
15	ಗೋಪಾಲಯ್ಯ ಮಾಲಗಿತ್ತಿ ಲಿಂಗಪ್ಪ	28/07/1965	3/03/1997	18/11/2005	
16	ಸರಸ್ವತಿ ಹುದ್ದಾರ್. ಟಿ	16/03/1967	28/02/1997	18/11/2005	
17	ದೇವರಾಜು	26/06/1964	21/02/1997	18/11/2005	
18	ನಾರಾಯಣಸ್ವಾಮಿ ಎಲ್	4/05/1965	1/03/1997	18/11/2005	
19	ಸೋಮಸುಂದರ್	14/06/1958	21/08/2000	24/05/2006	
20	ಪಿ. ಶ್ರೀನಿವಾಸ್	20/07/1974	21/08/2000	24/05/2006	
21	ಬಿ.ಜಿ. ಉಮೇಶ್	12/02/1972	17/04/2006	1/08/2011	
22	ಎಂ.ಎಸ್. ಕೃಷ್ಣಪ್ರಸಾದ್	12/03/1969	17/04/2006	1/08/2011	
23	ಎಂ.ಸಿ. ಕೇಶವಮೂರ್ತಿ	13/07/1969	17/04/2006	1/08/2011	
24	ಎಂ. ರವಿಕುಮಾರ್	21/07/1974	26/04/2006	1/08/2011	
25	ಬಿ. ರಾಮಾಂಜನೇಯ	1/06/1966	19/04/2006	3/05/2012	

ಕ್ರ.ಸಂ	ಅಧಿಕಾರಿಯ ಹೆಸರು ಶ್ರೀಯುತರು	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಭೂ.ಉ.ನಿ ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ	ಷರಾ
26	ಬಿ. ರಾಜಣ್ಣ	1/06/1967	17/4/2006	3/05/2012	
27	ಪಿ.ಎಸ್. ಕುಸುಮಲತ	8/02/1973	1/02/2006	3/05/2012	
28	ಕೆ. ರಮ್ಯ	4/07/1977	23/06/2006	3/05/2012	

P.R.535

ಸಿ. ಪುಟ್ಟನಂಜಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

ಸಾರಿಗೆ ಇಲಾಖೆ

ನೋಂದಣಿ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿ, ದಾವಣಗೆರೆ ಇವರ ಕಛೇರಿ ನಡಾವಳಿ

ಉಪಸ್ಥಿತರು : ಶ್ರೀ ಹೆಚ್.ಜೆ.ತೆಂಬದ್
ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ
ನೋಂದಣಿ ಪ್ರಾಧಿಕಾರ,
ದಾವಣಗೆರೆ.

ವಿಷಯ : ವಾಹನ ಸಂಖ್ಯೆ: KA-17/A-5622(S/C) ರ ನೋಂದಣಿಯನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ : 1) ವಾಹನ ಮಾಲೀಕರ ಅರ್ಜಿ ದಿನಾಂಕ: 02–05–2016.
2) ಮೋಟಾರು ವಾಹನ ನಿರೀಕ್ಷಕರ ವರದಿ ದಿನಾಂಕ: 04–05–2016.

ಪ್ರಸ್ತಾವನೆ :

ವಾಹನ ಸಂಖ್ಯೆ: KA-17/A-5622(S/C) (S/C)ರ ಮಾಲೀಕರಾದ SHRI CHANDRASHEKARAPPA L.B, S/O BHEEMAPPA, # 32, BILICHODU (A/P), JAGALUR (TQ), DAVANAGERE (D) ಇವರ ಮೇಲ್ಕಂಡ ವಾಹನವು ದುಸ್ಥಿತಿಯಲ್ಲಿರುವುದರಿಂದ ಸದರಿ ವಾಹನದ ನೋಂದಣಿ ರದ್ದತಿಗಾಗಿ ದಿನಾಂಕ: 02–05–2016ರಂದು ಮನವಿ ಸಲ್ಲಿಸಿರುತ್ತಾರೆ. ವಾಹನವು ದಿನಾಂಕ: 01–07–2015ರಿಂದ ಅಧ್ಯರ್ಪಣೆಯಲ್ಲಿದ್ದು ಇಂದಿನವರೆವಿಗೂ ಹಾಗೆಯೇ ಮುಂದುವರಿದಿದೆ ಹಾಗೂ ವಾಹನವು 2007ರ ಮಾದರಿಯದಾಗಿದ್ದು ರಸ್ತೆಯಲ್ಲಿ ಓಡಾಡಲು ಯೋಗ್ಯವಾಗಿರುವುದಿಲ್ಲವೆಂದು ರದ್ದುಪಡಿಸಬಹುದಾಗಿ ಹಿರಿಯ ಮೋಟಾರು ವಾಹನ ನಿರೀಕ್ಷಕರು ದಿನಾಂಕ: 04–05–2016ರ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಆದ್ದರಿಂದ, ವಾಹನ ಸಂಖ್ಯೆ: KA-17/A-5622(S/C)ರ ನೋಂದಣಿಯನ್ನು ರದ್ದುಪಡಿಸಲು ನಿರ್ಣಯಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

– : ಆದೇಶ :–

ಆದೇಶ ಸಂಖ್ಯೆ : ಪ್ರಾ.ಸಾ.ಅ/ದಾವ/ನೋ./KA-17/A-5622(S/C)/2016–17, ದಿನಾಂಕ : 04–05–2016.

ಶ್ರೀ **ಹೆಚ್.ಜೆ.ತೆಂಬದ್,** ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ನೋಂದಣಿ ಪ್ರಾಧಿಕಾರ, ದಾವಣಗೆರೆ ಆದ ನಾನು ನನಗೆ 1988ರ ಕೇಂದ್ರ ಮೋಟಾರು ವಾಹನ ಕಾಯ್ದೆ ಕಲಂ 55(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಮೇಲ್ಕಂಡ ಕಾರಣಗಳಿಂದಾಗಿ ಮೋ/ವಾ/ಸಂಖ್ಯೆ. KA-17/A-5622(S/C)ರ ಮೇಲೆ ಇನ್ನೂ ಮುಂದೆ ಏನಾದರೂ ವ್ಯತ್ಯಾಸ ತೆರಿಗೆ, ಆಡಿಟ್ ಹಾಗೂ ಇಲಾಖಾ ಪ್ರಕರಣಗಳು ಬಾಕಿ ಇರುವುದು ಕಂಡು ಬಂದರೆ ಅದನ್ನು ವಾಹನದ ಮಾಲಿಕರೇ ಕಟ್ಟಬೇಕೆಂಬ ನಿಬಂಧನೆಯೊಂದಿಗೆ ಸದರಿ ವಾಹನದ ನೋಂದಣಿಯನ್ನು ದಿನಾಂಕ: 04–05–2016ರಿಂದ ಜಾರಿಗೆ ಬರುವಂತೆ ರದ್ದು ಪಡಿಸುತ್ತೇನೆ.

ವಾಹನದ ವಿವರಗಳು

1	ಮೋಟಾರು ವಾಹನ ಸಂಖ್ಯೆ	KA-17/A-5622(S/C)
2	ವಾಹನದ ನೋಂದಣಿ ದಿನಾಂಕ	02-08-2007
3	ವಾಹನದ ತಯಾರಕನ ಹೆಸರು	M/s Ashok Leyland Ltd
4	ವಾಹನದ ವರ್ಗ	Stage Carriage
5	ವಾಹನ ತಯಾರಿಕೆ ವರ್ಷ	2007
6	ಚಾಸಿಸ್ ಸಂಖ್ಯೆ	BPE615897
7	ಯಂತ್ರ ಸಂಖ್ಯೆ	CPH448909
8	ತೆರಿಗೆ ಅವಧಿ	31-07-2015

9	ಮಾಲೀಕರ ಹೆಸರು ಮತ್ತು ವಿಳಾಸ	SHRI CHANDRASHEKARAPPA L B, S/O BHEEMAPPA, # 32, BILICHODU (A/P), JAGALUR (TQ), DAVANAGERE (D)

ಹೆಚ್.ಜೆ.ತೆಂಬದ್,
ಪ್ರಾದೇಶಿಕ ಸಾರಿಗೆ ಅಧಿಕಾರಿ,
ಹಾಗೂ ನೋಂದಣಿ ಪ್ರಾಧಿಕಾರ,
ದಾವಣಗೆರೆ.

PR. – 451

ಸಾರಿಗೆ ಇಲಾಖೆ

ನೋಂದಣಿ ಪ್ರಾಧಿಕಾರ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿ, ದಾವಣಗೆರೆ ಇವರ ಕಛೇರಿ ನಡಾವಳಿ

ಉಪಸ್ಥಿತರು : ಶ್ರೀ ಹೆಚ್.ಜೆ.ತೆಂಬದ್
ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ
ನೋಂದಣಿ ಪ್ರಾಧಿಕಾರ,
ದಾವಣಗೆರೆ.

ವಿಷಯ : ವಾಹನ ಸಂಖ್ಯೆ: KA-17/A-8694(L/T) ರ ನೋಂದಣಿಯನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ : 1) ಮಾಲೀಕರ ಅರ್ಜಿ ದಿನಾಂಕ: 24–03–2016.
2) ಮೋಟಾರು ವಾಹನ ನಿರೀಕ್ಷಕರ ವರದಿ ದಿನಾಂಕ: 02–04–2016.

ಪ್ರಸ್ತಾವನೆ :

ವಾಹನ ಸಂಖ್ಯೆ: KA-17/A-8694(L/T)ರ ಮಾಲೀಕರಾದ ಶ್ರೀ ಹುಂಚ್ಚೆಗೇಪ್ಪ.ಎನ್.ಬಿ., ಬಿನ್ ಬಸಪ್ಪ, ಹದಡಿ, ದಾವಣಗೆರೆ, ಮೇಲ್ಕಂಡ ವಾಹನವು ದುಸ್ಥಿತಿಯಲ್ಲಿರುವುದಾಗಿ ತಿಳಿಸಿ ಸದರಿ ವಾಹನದ ನೋಂದಣಿ ರದ್ದತಿಗೆ ದಿನಾಂಕ: 24–03–2016ರಂದು ಮನವಿ ಮಾಡಿರುತ್ತಾರೆ. ವಾಹನವು 2002ರ ಮಾದರಿಯಾಗಿದ್ದು ರಸ್ತೆಯಲ್ಲಿ ಓಡಿಸಲು ಯೋಗ್ಯವಾಗಿರುವುದಿಲ್ಲವೆಂದು ತಿಳಿಸಿರುವುದರ ಮೂಲಕ ಮೇಲ್ಕಂಡ ವಾಹನದ ನೋಂದಣಿಯನ್ನು ರದ್ದುಪಡಿಸಬಹುದಾಗಿ ಮೋಟಾರು ವಾಹನ ನಿರೀಕ್ಷಕರು ದಿನಾಂಕ: 02–04–2016ರ ಉಲ್ಲೇಖ (2)ರ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಆದ್ದುದರಿಂದ, ವಾಹನ ಸಂಖ್ಯೆ: KA-17/A-8694(L/T)ರ ನೋಂದಣಿಯನ್ನು ರದ್ದು ಪಡಿಸಲು ಆದೇಶಿಸಿದೆ.

– : ಆದೇಶ :–

ಆದೇಶ ಸಂಖ್ಯೆ : ಪ್ರಾ.ಸಾ.ಅ.ನೋ.ವಿ–01/2016–17 KA-17/A-8694(L/T)**, ದಿನಾಂಕ : 05–04–2016.**

ಹೆಚ್.ಜೆ.ತೆಂಬದ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ನೋಂದಣಿ ಪ್ರಾಧಿಕಾರ, ದಾವಣಗೆರೆ ಆದ ನಾನು ನನಗೆ 1988ರ ಕೇಂದ್ರ ಮೋಟಾರು ವಾಹನ ಕಾಯ್ದೆ 55(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಮೇಲ್ಕಂಡ ಕಾರಣಗಳಿಂದಾಗಿ ಮೋ/ವಾ/ಸಂಖ್ಯೆ. KA-17/A-8694(L/T)ರ ಮೇಲೆ ಮುಂದೆ ಏನಾದರೂ ತೆರಿಗೆ, ಆಡಿಟ್ ಹಾಗೂ ಇಲಾಖಾ ಪ್ರಕರಣಗಳು ಬಾಕಿ ಇರುವುದು ಕಂಡು ಬಂದರೆ ಅದನ್ನು ವಾಹನದ ಮಾಲಿಕರೇ ಕಟ್ಟಬೇಕೆಂಬ ನಿಬಂಧನೆಯೊಂದಿಗೆ ಸದರಿ ವಾಹನದ ನೋಂದಣಿಯನ್ನು ರದ್ದು ಪಡಿಸುತ್ತೇನೆ.

ವಾಹನದ ವಿವರಗಳು

1	ಮೋಟಾರು ವಾಹನ ಸಂಖ್ಯೆ	KA-17/A-8694
2	ವಾಹನದ ನೋಂದಣಿ ದಿನಾಂಕ	02-02-2003
3	ವಾಹನದ ತಯಾರಕನ ಹೆಸರು	Bajaj Tempo Ltd
4	ವಾಹನದ ವರ್ಗ	Mot/Cab
5	ವಾಹನ ತಯಾರಿಕೆ ವರ್ಷ	2002
6	ಚಾಸಿಸ್ ಸಂಖ್ಯೆ	T55019907K02
7	ಯಂತ್ರ ಸಂಖ್ಯೆ	D01033300
8	ತೆರಿಗೆ ಅವಧಿ	30-04-2016
9	ಮಾಲೀಕರ ಹೆಸರು ಮತ್ತು ವಿಳಾಸ	ಶ್ರೀ ಹುಂಚ್ಚೆಗೇಪ್ಪ.ಎನ್.ಬಿ., ಬಿನ್ ಬಸಪ್ಪ, ಹದಡಿ, ದಾವಣಗೆರೆ.

PR. – 452

ಹೆಚ್.ಜೆ.ತೆಂಬದ್,
ಪ್ರಾದೇಶಿಕ ಸಾರಿಗೆ ಅಧಿಕಾರಿ,
ಹಾಗೂ ನೋಂದಣಿ ಪ್ರಾಧಿಕಾರ,
ದಾವಣಗೆರೆ.

DEPARTMENT OF COMMERCIAL TAXES

OFFICE OF THE COMMISSIONER OF COMMERCIAL TAXES, (Karnataka)

Vanijya Therige Karyalaya, Gandhinagar, Kalidasa Road, Bengaluru – 560 009.

NO. CLR.CR/138/2014-15

PROCEEDINGS OF THE COMMISSIONER OF COMMERCIAL TAXES, (KARNATAKA), BENGALURU CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Present : **RITVIK PANDEY, I.A.S,**
Commissioner Of Commercial Taxes,
(Karnataka) Bengaluru.

Sub : KVAT Act, 2003 – Clarification under Section 59(4) regarding the rate of tax applicable on “Fabrics for seats and doors of Automobiles” – reg.

Ref : Application dated: 29-12-2014 of M/s TB Kawashima Automotive Textile India Pvt. Ltd., Plot No. 41-43, KIADB Indl.Area, Kadakola, Mysuru - 571 311 (TIN: 29701142772).

In the application cited above M/s TB Kawashima Automotive Textile India Pvt. Ltd., Plot No. 41-43, KIADB Indl.Area, Kadakola, Mysuru - 571 311 (TIN: 29701142772) has sought clarification regarding the rate of tax applicable on “Fabrics for seats and doors of Automobiles”.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. On verification it is noticed that, the samples produced pertain to laminated fabric and PVC fabric which are made of different types of plastic. Hence, the said commodities fall under Entry 30 of III schedule to the KVAT Act, 2003 as “HDPE and other plastic woven fabrics” and are exigible to tax @ 5.5%.

4. Hence the following clarification is issued.

CLARIFICATION NO. CLR.CR. 138/2014-15, DATED: 23-04-2016.

It is clarified that, the samples produced pertain to laminated fabric and PVC fabric which are made of different types of plastic. Hence, the “Fabrics for seats and doors of Auto Mobiles” fall under Entry 30 of III Schedule to the KVAT Act, 2003 as “HDPE and other plastic woven fabrics” and are exigible to tax @ 5.5% with effect from 01-08-2012.

RITVIK PANDEY,
Commissioner Of Commercial Taxes,
(Karnataka) Bengaluru.

PR. – 455
S.C. - 25

DEPARTMENT OF COMMERCIAL TAXES

OFFICE OF THE COMMISSIONER OF COMMERCIAL TAXES, (Karnataka)

Vanijya Therige Karyalaya, Gandhinagar, Kalidasa Road, Bengaluru – 560 009.

NO. CLR.CR/142/2015-16

PROCEEDINGS OF THE COMMISSIONER OF COMMERCIAL TAXES, (KARNATAKA), BENGALURU CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Present : **RITVIK PANDEY, I.A.S,**
Commissioner Of Commercial Taxes,
(Karnataka) Bengaluru.

Sub : KVAT Act, 2003 – Clarification under Section 59(4) of the Karnataka Value Added Tax Act, 2003 regarding “Polyesters Powder” – Reg.

Ref : Application dated: 27-01-2016 of M/s. Marpol Pvt.Ltd., No. 47/C, Kebbehalla Road, Byraveshwaranagar, Vishwaneedam Post, Sunkadakatte, Magadi Road, Near State Bank of Mysuru, Bengaluru – 560 091. (TIN: 29380701307)

In the application cited above M/s Marpol Pvt.Ltd., No. 47/C, Kebbehalla Road, Byraveshwaranagar, Vishwaneedam Post, Sunkadakatte, Magadi Road, Near State Bank of Mysuru, Bengaluru – 560 091 (TIN: 29380701307) has sought clarification regarding the rate of tax applicable on “Polyesters Powder”. The applicant in his application has stated that “Polyesters Powder” manufactured and sold by them is covered under sub-heading 39079990 of the Central Excise Tariff Act, 1985, classifiable under Sl. No. 133 of the

Notification No. FD 197 CSL 2005(6), dated: 30.04.2005 under Tariff item 3907 “Polyacetals, other polyethers and epoxide resins, in primary forms ; polycarbonates, alkyd resins, polyallylesters and other polyesters, in primary forms”. Hence, they have requested for clarification as to the rate of tax applicable on Polyesters Powder.

2. Section 59(4) of the Karnataka Value Added Tax Act, 2003 (herein afterwards called ‘Act’) empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that, the clarification requested by the petitioner is within the scope of the aforesaid provision and it is necessary that, the clarification be issued for the purpose of maintaining uniformity in the work of assessments and collection of revenue.

3. The matter is examined. On examination of the product description of ‘Polyesters Powder’ provided by the applicant in his application and the classification of the same under sub-heading 39079990 of the Central Excise Tariff Act, 1985, in the tax invoice furnished by the applicant, it is noticed that the commodity for which clarification is sought is classifiable under Sl. No. 133 of the Notification No. FD 197 CSL 2005(6), dated: 30-04-2005 under Tariff item 3907 “Polyacetals, other polyethers and epoxide resins, in primary forms ; polycarbonates, alkyd resins, polyallylesters and other polyesters, in primary forms”. As this commodity falls under the said serial number of the notification, commodities classified under heading 3907 of Central Excise Tariff Act, 1985 qualifies as industrial input falling under serial number 51 of the III Schedule to KVAT Act, 2003. Therefore, ‘Polyesters Powder’ which is classified under sub-heading 39079990 of heading 3907, falls under Sl. No. 133 of the Notification No. FD 197 CSL 2005(6), dated: 30.4.2005 is taxable at 4% w.e.f., 1.4.2005 to 31.3.2010 and at 5% from 1.4.2010 to 31.7.2012 and at 5.5% w.e.f., 1.8.2012 and onwards.

4. Hence the following clarification is issued.

CLARIFICATION NO. CLR.CR. 142/2015-16, DATED: 25-04-2016.

It is clarified that, ‘Polyesters Powder’ falls under Sl. No. 133 of the Notification No. FD 197 CSL 2005(6), dated: 30.4.2005 under Tariff item 3907 “Polyacetals, other polyethers and epoxide resins, in primary forms ; polycarbonates, alkyd resins, polyallylesters and other polyesters, in primary forms” and is taxable at 4% w.e.f., 1.4.2005 to 31.3.2010 and at 5% from 1.4.2010 to 31.7.2012 and at 5.5% w.e.f., 1.8.2012 and onwards.

RITVIK PANDEY,
Commissioner Of Commercial Taxes,
(Karnataka) Bengaluru.

PR. 456
S.C. - 25

DEPARTMENT OF COMMERCIAL TAXES

OFFICE OF THE COMMISSIONER OF COMMERCIAL TAXES, (Karnataka)

Vanijya Therige Karyalaya, Gandhinagar, Kalidasa Road, Bengaluru – 560 009.

NO. CLR.CR/158/2014-15

PROCEEDINGS OF THE COMMISSIONER OF COMMERCIAL TAXES, (KARNATAKA), BENGALURU CLARIFICATION UNDER SECTION 59(4) OF THE KARNATAKA VALUE ADDED TAX ACT, 2003.

Present : **RITVIK PANDEY, I.A.S,**
Commissioner Of Commercial Taxes,
(Karnataka) Bengaluru.

Sub : KVAT Act, 2003 – Clarification under Section 59(4) regarding the rate of tax applicable on “Vacuum Furnace”-reg,

Ref : Application dated: 13-02-2015 M/s. Vacuum Techniques Pvt. Ltd., No. 36A, AGS Layout, MSR Nagar, Bengaluru – 560 054. (TIN: 29870072332)

In the application cited above of M/s Vacuum Techniques Pvt. Ltd., No. 36A, AGS Layout, MSR Nagar, Bengaluru – 560 054 (TIN: 29870072332) has sought clarification regarding the rate of tax applicable on “Vacuum Furnace”.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that, the clarification requested by the petitioner is within the scope of the aforesaid provision and it is necessary that, the clarification be issued for the purpose of maintaining uniformity in the work of assessments and collection of revenue.

3. On verification it is noticed that, the applicant has stated that the Commodity Code under Central Excise Tariff Sub-heading is 84171000. As said HSN code is covered under Sl. No. 5 of the Notification No. FD 316 CSL 2005 (1), dated: 05.08.2005, “Vacuum Furnace” is taxable at 5.5% w.e.f., 01.8.2012.

4. Hence the following clarification is issued.

